<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ದಕ್ಷಿಣ ಕನ್ನಡ, ಮಂಗಳೂರು.</u>

**<u>ಸೆಷನ್ಸ್ ಕೇಸ್ ನಂಬ್ರ 76/2023</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀಮತಿ ಚೈತ್ರಶ್ರೀ | <u>ಪ್ರಾಸಾಃ 13</u> |
| ಗಂಡನ ಹೆಸರು | : | ಸತೀಶ್ ಕುಮಾರ್ | <u>ಚಾಸಾಃ 23</u> |
| ಪ್ರಾಯ | : | 36 ವರ್ಷ | **<u>ದಿನಾಂಕಃ 17.09.2025</u>** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಮಹಿಳಾ ಹೆಚ್. ಸಿ , ಕಾವೂರು ಪೊಲೀಸ್ ಠಾಣೆ | |
| ವಾಸಸ್ಥಳ | : | ಬಜ್ಪೆ , ಮಂಗಳೂರು | |

**<u>ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ</u>**

ನಾನು 2022 ರಿಂದ ಮೇ 2025 ರವರೆಗೆ ಮಂಗಳೂರಿನ ಬಜ್ಪೆ ಪೊಲೀಸ್ ಠಾಣೆ ಯಲ್ಲಿ ಮಹಿಳಾ ಪಿ.ಸಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕ 28.11.2022 ರಂದು ಚಾಸಾ-28 ರವರು ನನ್ನನ್ನು ಮತ್ತು ಚಾಸಾ-24 ರವರನ್ನು ಮಂಗಳೂರು ತಾಲೂಕು ತೆಂಕ ಎಕ್ಕಾರು ಗ್ರಾಮದ ಪಲ್ಲದಕೋಡಿ ಎಂಬಲ್ಲಿಗೆ ತಕ್ಷೀರು ಜಾಗದ ಮಹಜರು ಬಗ್ಗೆ ಇಲಾಖಾ ವಾಹನದಲ್ಲಿ ಕರೆದುಕೊಂಡು ಹೋಗಿರುತ್ತಾರೆ. ಚಾಸಾ-8 ಮತ್ತು 9 ರವರನ್ನು ತನಿಖಾಧಿಕಾರಿಯವರು ಪಂಚರಾಗಿ ಹಾಜರಿರುವಂತೆ ಸೂಚಿಸಿದ್ದು ಅದಕ್ಕೆ ಅವರು ಒಪ್ಪಿಕೊಂಡಿದ್ದು ಮತ್ತು ಪ್ರತ್ಯಕ್ಷ ಸಾಕ್ಷ್ಯದಾರರಾದ ಚಾಸಾ-2 ರವರು ತಕ್ಷೀರು ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ, ತನಿಖಾಧಿಕಾರಿಯವರು ನೀಡಿದ ಉಕ್ತಲೇಖನದಂತೆ ಮದ್ಯಾಹ್ನ 1.10 ರಿಂದ 3.00 ಗಂಟೆಯವರೆಗೆ ಮಹಜರನ್ನು ಸ್ಥಳದಲ್ಲಿ ನಾನು ಬರೆದಿರುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ಮಹಜರನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ)

ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ಫೋಟೊಗಳನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿ ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸುತ್ತಾರೆ.

3. ನಂತರ, ತನಿಖಾಧಿಕಾರಿಯವರು ನೀಡಿದ ವೈದ್ಯಕೀಯ ಮರಣೋತ್ತರ ಪರೀಕ್ಷೆಗೆ ಬೇಕಾದ ಪ್ರಪತ್ರಗಳನ್ನು ಮತ್ತು ರಹದಾರಿ ಪತ್ರವನ್ನು ಪಡೆದುಕೊಂಡು ಜಿಲ್ಲಾ ವೆನ್ಲಾಕ್ ಆಸ್ಪತ್ರೆಗೆ ಮೃತ ಶರೀರದ ಜೊತೆ ಬೆಂಗಾವಲಿನಲ್ಲಿ ತೆರಳಿರುತ್ತೇನೆ. ಅಲ್ಲಿ ವೈದ್ಯರು ಶವಪರೀಕ್ಷೆ ಆದ ಬಳಿಕ ಮೃತ ಶರೀರವನ್ನು ಅವರ ತಾಯಿ ಅಮ್ಮಣ್ಣಿರವರಿಗೆ ಸ್ವತ್ತುಗಳ ಸಮೇತ ಸೂಕ್ತ ರಶೀದಿ ಪಡೆದು ಹಸ್ತಾಂತರಿಸಿರುತ್ತಾರೆ.

4. ನಂತರ ವೈದ್ಯಾದಿಕಾರಿಯವರು ನೀಡಿದ ಸ್ವತ್ತುಗಳಾದ ನಸು ಹಳದಿ ಬಣ್ಣದ ಎಕ್ಸ್ ಎಲ್ ಲೆಗಿನ್ಸ್ ಪ್ಯಾಂಟ್ ಮತ್ತು ಪಿಂಕ್ ಮತ್ತು ಕಪ್ಪು ಬಣ್ಣದ ಬೆಡ್ ಶೀಟ ನ್ನು ತನಿಖಾಧಿಕಾರಿಯವರಿಗೆ ತಂದು ನೀಡಿರುತ್ತೇನೆ. ಅವರು ಸಂಜೆ 6.30 ರಿಂದ 7.15 ರವರೆಗೆ ಸ್ವತ್ತು ಸ್ವಾಧೀನತಾಮಹಜರು ಮುಖೇನ ಸದರಿ ಬಟ್ಟೆಗಳನ್ನು ಸ್ವಾಧೀನಪಡಿಸಿ, ಪ್ರತ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಅರಗು ಸೀಲು ಹಾಕಿ, ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತಾರೆ. ಸದರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ಮಹಜರನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-4(ಬಿ)** ಎಂದು ಗುರುತಿಸಲಾಯಿತು. ಸದರಿ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಸದರಿ ಬಟ್ಟೆಗಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಎಂ.ಒ-9 ಮತ್ತು 10 ಎಂದು

ಗುರುತಿಸಲಾಗಿರುತ್ತದೆ.

**<u>ಪಾಟೀ ಸವಾಲುಃ ಆರೋಪಿ ಪರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವಕೀಲರಾದ ಶ್ರೀ ಕೆ.ಡಿ.ಎಸ್. ವಕೀಲರಿಂದಃ</u>-**

5. ತನಿಖಾಧಿಕಾರಿಯವರು ಸ್ಥಳಕ್ಕೆ ಬೇಟಿ ನೀಡಿದ ಮೇಲೆ ಅಲ್ಲಿ ನೆರೆದಿದ್ದ ಜನರಲ್ಲಿ ಇಬ್ಬರನ್ನು ಪಂಚರಾಗಿ ಸಹಕರಿಸಲು ಕೋರಿರುತ್ತಾರೆ. ನಾನು ಅಲ್ಲಿಗೆ ಹೋದಾಗ ಸುಮಾರು 20 ರಿಂದ 30 ಜನರು ಇದ್ದರು. ನಾನು ಹೋಗುವ ಮುಂಚೆ ಅಥವಾ ನಂತರದಲ್ಲಿ ತಹಶೀಲ್ದಾರ್ ಮತ್ತು ಅಸಿಸ್ಟೆಂಟ್ ಕಮೀಷನರ್ ಬಂದಿರುವುದಿಲ್ಲ. ನಾನು ಹೋಗುವ ಮುಂಚೆ ಸ್ಥಳದಲ್ಲಿ ನಮ್ಮ ಠಾಣೆಯ ಸಿಬ್ಬಂದಿಗಳು ಮತ್ತು ಹೊಯ್ಸಳ ವಾಹನ ಇತ್ತು.

6. ನಾನು ಹೋದಾಗ ಮೃತದೇಹ ಕೋಣೆಯ ಒಳಗೆ ಇತ್ತು. ಆ ಸಮಯದಲ್ಲಿ ನಮ್ಮ ಸಿಬ್ಬಂದಿಗಳು ಫೋಟೊ ತೆಗೆದಿರುವುದಿಲ್ಲ, ಆದರೆ ವೀಡಿಯೋ ಮಾಡಿರುತ್ತಾರೆ. ನಿಪಿ-3 ರಲ್ಲಿ ತೋರಿಸಿದ ಸ್ಥಳ ಸದರಿ ಮನೆಯಿಂದ 12 ಅಡಿ ದೂರದಲ್ಲಿ ಇತ್ತು. ನಿಪಿ-3 ರ ಫೋಟೋವನ್ನು ಮರದ ಹಲಗೆ ಮತ್ತು ರೀಪು ಸ್ವಾಧೀನಪಡಿಸಿಕೊಂಡ ಸಮಯದಲ್ಲಿ ತೆಗೆಯಲಾಗಿತ್ತು. ಸದರಿ ಮರದ ಹಲಗೆ ಮತ್ತು ರೀಪನ್ನು ಆರೋಪಿಯು ತೋರಿಸಿರುತ್ತಾರೆ. ನಾನು ಹೋದ ಸಮಯದಲ್ಲಿ ಆರೋಪಿ ಮನೆಯಲ್ಲೇ ಇದ್ದರು. ಆರೋಪಿ ನನಗೆ ಯಾವುದೇ ಮರದ ಹಲಗೆ ಮತ್ತು ರೀಪನ್ನು ತೋರಿಸಿರುವುದಿಲ್ಲ, ಬದಲಾಗಿ ನಿಪಿ-3 ರ ಫೋಟೋವನ್ನು ಆರೋಪಿಯನ್ನು ಸದರಿ ಜಾಗಕ್ಕೆ ಕರೆದುಕೊಂಡು ಹೋಗಿ ತೆಗೆಯಲಾಗಿದೆ ಎಂದರೆ ಸರಿಯಲ್ಲ. ಮಹಜರಿನ ಸಮಯದಲ್ಲಿ ನಕ್ಷೆ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ.

7. ನಿಪಿ-3 ರಲ್ಲಿ ನಮೂದಾದ ಸ್ವತ್ತುಗಳನ್ನು ಬಿಟ್ಟರೆ ಆ ಸಮಯದಲ್ಲಿ ಇನ್ನಾವುದೇ ಸ್ವತ್ತುಗಳು ಇರಲಿಲ್ಲ. ಸದರಿ ಮಹಜರಿನಲ್ಲಿ ಆ ಬಗ್ಗೆ ಮಾತ್ರ ನಮೂದು ಇದೆ. ನಾನು ಆಸ್ಪತ್ರೆಗೆ ಹೋದ ಸಮಯದಲ್ಲಿ ತಹಶೀಲ್ದಾರ್ ರವರು ಅಥವಾ ಎ.ಸಿ ರವರು ಇರಲಿಲ್ಲ. ಘಟನಾ ಸ್ಥಳದಲ್ಲಿ ಶವದ ಚಹರೆ , ಗಾಯಗಳ ಬಗ್ಗೆ ಮಾಡಿದ ಮಹಜರನ್ನು ನಾನೇ ಬರೆದಿರುತ್ತೇನೆ. ಆ ಸಮಯದಲ್ಲಿ ಫೋಟೋಗಳನ್ನು ತೆಗೆಯಲಾಗಿದೆ, ಯಾರು ತೆಗೆದಿರುತ್ತಾರೆ ಎಂದು ಗೊತ್ತಿಲ್ಲ.

8. ನಾನು ಬಟ್ಟೆಗಳನ್ನು ತನಿಖಾಧಿಕಾರಿಯವರಿಗೆ ಹಸ್ತಾಂತರಿಸುವ ಸಮಯದಲ್ಲಿ ನಾನು ಲಿಖಿತ ವರದಿಯನ್ನು ನೀಡಿರುವುದಿಲ್ಲ. ನಾನು ವೈದ್ಯರಿಂದ ಬಟ್ಟೆಯನ್ನು ತೆಗೆದುಕೊಳ್ಳುವ ಸಮಯದಲ್ಲಿ ಲಿಖಿತವಾಗಿ ಏನು ಕೊಟ್ಟಿರುವುದಿಲ್ಲ. ಬಟ್ಟೆಗಳ ಮಹಜರಿನ ಸಮಯದಲ್ಲಿ ಫೋಟೋವನ್ನು ತೆಗೆದಿರುವುದಿಲ್ಲ. ಸದರಿ ಬಟ್ಟೆಗಳನ್ನು ನನ್ನ ಸಮಕ್ಷಮ ಪ್ಯಾಕ್ ಮಾಡಿರುತ್ತಾರೆ, ನಾನು ಅದರ ಮೇಲೆ ಅಂಟಿಸಿದ ಚೀಟಿಗೆ ಸಹಿ ಮಾಡಿರುವುದಿಲ್ಲ. ನನಗೆ ವೈದ್ಯರು ಬಟ್ಟೆಗಳನ್ನು ಹಸ್ತಾಂತರಿಸಿರುವುದಿಲ್ಲ ಮತ್ತು ಠಾಣೆಯಲ್ಲಿ ತಯಾರಿಸಿದ ಮಹಜರಿಗೆ ತನಿಖಾಧಿಕಾರಿಯವರು ಹೇಳಿದ ಮೇರೆಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)
ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.